# ಇರುವೆ

ಇರುವೆ ಬಂತು
ಇರುವೆ ಬಂತು
ನೋಡು ಸರತಿ ಸಾಲು
ತಲೆಯ ಮೇಲೆ
ಭಾರದ ಉಂಡೆ
ಕೆಳಗೆ ಚಿಕ್ಕ ಕಾಲು

ಬಣ್ಣ ಕಪ್ಪು
ಪುಟ್ಟ ಗಾತ್ರ
ಗೋಲಿಯಂಥ ಕಣ್ಣು
ಚಿಕ್ಕ ಮನೆಯ
ಕಟ್ಟಿಬಿಡುವುದು
ಕೊರೆದುಕೊಂಡು ಮಣ್ಣು!

ಬೆಲ್ಲವಿರಲಿ
ಬೇಳೆಯಿರಲಿ
ಹಿಡಿದು ಬಿಡುವುದು ಕಂಡು
ಸದ್ದು ಮಾಡದೆ
ತಂದೇ ಬಿಡುವುದು ತನ್ನಯ ದಂಡು

ರಜೆಯ ಮಜವು
ಇಲ್ಲವೆ ಇಲ್ಲ
ದುಡಿಯುವುದೊಂದೆ ಗೊತ್ತು
ಇದರ ದಿನಚರಿ
ಅರಿತರೆ ಮನುಜ
ಗಳಿಸಿ ಬಿಡುವನು ಸ್ವತ್ತು!

**-ಸುರೇಶ ಕಂಬಳಿ, ಕೊಪ್ಪಳ**



---

# ಒಳ್ಳೆಯ ಕೆಲಸ

ಒಂದೂರಿನಲ್ಲಿ ಹತ್ತಿರದ ಪಟ್ಟಣಕ್ಕೆ ಹೋಗುವ ಒಂದು ರಸ್ತೆಯ ಪಕ್ಕದಲ್ಲಿ ಒಂದು ಸಾಧಾರಣ ಮನೆಯಿತ್ತು. ಆ ಮನೆಯಲ್ಲಿ ವಾಸಿಸುತ್ತಿದ್ದ ಮಹಿಳೆ ಪ್ರತಿದಿನ ಬೆಳಿಗ್ಗೆ ರೊಟ್ಟಿ ಮಾಡುವಾಗ, ಒಂದು ಹೆಚ್ಚುವರಿ ರೊಟ್ಟಿಯನ್ನು ತಯಾರಿಸಿ, ಅದನ್ನು ರಸ್ತೆ ಬದಿಯ ಕಿಟಕಿಯ ಹೊರಭಾಗದಲ್ಲಿ ಇಡುತ್ತಿದ್ದಳು. ಆ ಕಿಟಕಿಯ ಪಕ್ಕದಲ್ಲಿ ನಡೆದು ಹೋಗುವವರು ಆ ರೊಟ್ಟಿಯನ್ನು ತೆಗೆದುಕೊಳ್ಳಬಹುದಾಗಿತ್ತು. ಆ ಮಾರ್ಗದಲ್ಲಿ ಸಾಮಾನ್ಯವಾಗಿ ಬೆಳಿಗ್ಗೆ ಬೇಗ ಹಾದು ಹೋಗುತ್ತಿದ್ದ ಗೂನು ಬೆನ್ನಿನ ವ್ಯಕ್ತಿಯೊಬ್ಬ ರೊಟ್ಟಿಯನ್ನು ತೆಗೆದುಕೊಳ್ಳುತ್ತಿದ್ದ. ಹಾಗೆ ರೊಟ್ಟಿಯನ್ನು ತೆಗೆದುಕೊಳ್ಳುವಾಗ ಅವನು 'ನೀನು ಮಾಡುವ ಕೆಟ್ಟ ಕೆಲಸ ನಿನ್ನಲ್ಲೇ ಉಳಿಯುತ್ತದೆ. ನೀನು ಮಾಡುವ ಒಳ್ಳೆ ಕೆಲಸ ನಿನ್ನ ಬಳಿಗೇ ಹಿಂದಿರುಗುತ್ತದೆ' ಎಂದು ತನ್ನಷ್ಟಕ್ಕೇ ಹೇಳಿಕೊಳ್ಳುತ್ತಿದ್ದ. ಒಂದು ದಿನ ಈ ಮಾತುಗಳು ಮಹಿಳೆಗೆ ಅಸ್ಪಷ್ಟವಾಗಿ ಕೇಳಿಸಿದುವು. ಅವಳಿಗೆ ಹೇಗೆ ಕೇಳಿಸಿತೊ ಅಥವಾ ಅರ್ಥವಾಗಲಿಲ್ಲವೊ, ಮಹಿಳೆಗೆ ಕೋಪ ಬಂದಿತು.

ತಾನು ಮಾಡಿಡುವ ರೊಟ್ಟಿಯನ್ನು ತೆಗೆದುಕೊಳ್ಳುವ ಈ ಮನುಷ್ಯ ಒಂದು ಸಲವಾದರೂ ಧನ್ಯವಾದ ಹೇಳದೆ, ಬೇರೇನೊ ಗೊಣಗುಟ್ಟುತ್ತಾನಲ್ಲ ಎಂದು ಬೇಸರಪಟ್ಟಳು. ಪರಿಣಾಮವಾಗಿ ಆಕೆಯ ಮನಸ್ಸಿನಲ್ಲಿ ಕೆಟ್ಟ ಯೋಚನೆ ಬಂದಿತು. ಮಾರನೇ ಬೆಳಿಗ್ಗೆ ಯಥಾಪ್ರಕಾರ ಕಿಟಕಿಯಲ್ಲಿ ರೊಟ್ಟಿ ಇತ್ತು, ಆದರೆ ಅದು ವಿಷದ ರೊಟ್ಟಿಯಾಗಿತ್ತು. ಕೆಲವೇ ಕ್ಷಣಗಳಲ್ಲಿ, ಕೋಪ ಬೇಸರ ಮಾಯವಾಗಿ, ಮನಸ್ಸು ತಿಳಿಯಾದಾಗ ಕಿಟಕಿಯ ಕಡೆಗೆ ಓಡಿದಳು, ಇನ್ನೂ ಅಲ್ಲಿಯೇ ಇದ್ದ ಆ ವಿಷದ ರೊಟ್ಟಿಯನ್ನು ತೆಗೆದುಕೊಂಡು ಸುಟ್ಟು ಹಾಕಿದಳು. ಲಗುಬಗೆಯಿಂದ ತನ್ನ ಪಾಲಿನ ರೊಟ್ಟಿಯೊಂದನ್ನು ಕಿಟಕಿಯಲ್ಲಿಟ್ಟು, ದೇವರಲ್ಲಿ ಕ್ಷಮೆ ಯಾಚಿಸಿದಳು. ಗೂನು ಬೆನ್ನಿನವ ಎಂದಿನಂತೆ ತನ್ನಷ್ಟಕ್ಕೇ ಮಾತಾಡಿಕೊಳ್ಳುತ್ತಾ, ರೊಟ್ಟಿಯನ್ನು ತೆಗೆದುಕೊಂಡು, ಕೈ ಚೀಲದಲ್ಲಿಟ್ಟುಕೊಳ್ಳುತ್ತಾ ನಡೆದದ್ದು ಕಾಣಿಸಿತು.



ಕೆಲಸದ ನಿಮಿತ್ತ ಪಟ್ಟಣಕ್ಕೆ ಹೋಗಿದ್ದ ಮಗ ಇನ್ನೂ ಹಿಂದಿರುಗಿಲ್ಲ ಎಂಬ ತಳಮಳ ಮಹಿಳೆಗೆ. ಆಯಾಸವಾದಂತಾಗಿ ಹಾಗೇ ಗೋಡೆಗೊರಗಿ, ಕಣ್ಮುಚ್ಚಿ ನಿದ್ರೆಗೆ ಜಾರಿದಳು. ಎಷ್ಟೋ ಹೊತ್ತಿನ ನಂತರ ಬಾಗಿಲು ಬಡಿದ ಶಬ್ದದಿಂದ ಎಚ್ಚರವಾದಾಗ ಕತ್ತಲಾವರಿಸಿತ್ತು. ಚಕ್ಕನೆದ್ದು, ಬಾಗಿಲು ತೆರೆದರೆ, ಎದುರಿಗೆ ಮಗ ನಿಂತಿದ್ದ. ಆದರೆ ಬಾಡಿದ ಮುಖದ ಮಗ, ಒಳಗಡಿ ಇಟ್ಟವನೇ ಕುಸಿದು ಕುಳಿತದ್ದು ನೋಡಿ, ಕಂಗಾಲಾದಳು. ತಾಯಿಯ ವಾತ್ಸಲ್ಯಭರಿತ ಮುಖ, ಗಾಬರಿ ಕಂಡವನೇ ಚೇತರಿಸಿಕೊಂಡು ನಡೆದದ್ದನ್ನು ಹೇಳಲಾರಂಭಿಸಿದ: 'ಕೈಯಲ್ಲಿದ್ದ ಕಾಸೆಲ್ಲಾ ಖರ್ಚಾಗಿತ್ತು, ಊರಿಗೆ ನಡೆದೇ ಹೊರಟೆ. ಜೇಬು, ಹೊಟ್ಟೆ ಎರಡೂ ಖಾಲಿ. ಅರ್ಧ ದೂರ ನಡೆಯುವಷ್ಟರಲ್ಲಿ ಹಸಿವು, ದಣಿವು ಹೆಚ್ಚಾಗಿ ದಾರಿ ಬದಿಯಲ್ಲೇ ಕುಸಿದುಬಿದ್ದೆ. ಸ್ವಲ್ಪ ಹೊತ್ತಿನ ನಂತರ ಗೂನುಬೆನ್ನಿನ ವ್ಯಕ್ತಿ ನನ್ನನ್ನು ಕೂಡಿಸಿ, ಒಂದು ರೊಟ್ಟಿಯನ್ನು ತಿನ್ನಲು ಕೊಟ್ಟ. ಆ ರೊಟ್ಟಿಯನ್ನು ತಿಂದ ನಂತರ ನನಗೆ ಎದ್ದು ನಡೆಯಲು ಸಾಧ್ಯವಾಯಿತು. ಇಲ್ಲವಾದರೆ, ನಾನು ಅಲ್ಲೇ ಹಸಿವಿನಿಂದ ಸಾಯುತ್ತಿದ್ದೆನೇನೊ!'

ಇದೆಲ್ಲಾ ಕೇಳಿದ ಆ ಮಹಿಳೆ ದಿಗ್ಮೂಢಳಾಗಿಬಿಟ್ಟಳು. ಕಾಲುಗಳು ಅದುರುತ್ತಿದ್ದವು, ಕಣ್ಣುಗಳು ಹನಿಗೂಡಿದವು. ತನ್ನ ಒಂದು ಕ್ಷಣದ ಸಿಟ್ಟಿನಿಂದಾಗ ಆಗಬಹುದಾಗಿದ್ದ ಅನಾಹುತವನ್ನು ನೆನೆದು ತತ್ತರಿಸಿದಳು. ಪಶ್ಚಾತ್ತಾಪದಿಂದ ಬೆಂದು, ಮಗನಿಗೆ ನಡೆದದ್ದನ್ನೆಲ್ಲಾ ಹೇಳಿದಳು. ಕ್ಷಮಿಸುವಂತೆ ದೇವರನ್ನು ಪ್ರಾರ್ಥಿಸಿದಳು. ಮಾರನೇ ಬೆಳಿಗ್ಗೆ, ಆ ಗೂನುಬೆನ್ನಿನ ವ್ಯಕ್ತಿಗೆ ವಿಶೇಷ ರೊಟ್ಟಿಯನ್ನು ಕೈಯಾರೆ ಕೊಡಬೇಕೆಂದೂ, ಅವನ ಕ್ಷಮೆ ಯಾಚಿಸಬೇಕೆಂದೂ, ಕೃತಜ್ಞತೆ ತಿಳಿಸಬೇಕೆಂದೂ ಸಂಕಲ್ಪಿಸಿಕೊಂಡಾಗ ಮನಸ್ಸು ನಿರಾಳವಾಯಿತು.

**-ಹಾಡ್ಯ ಬ. ಜಯಾನಂದ, ಮೈಸೂರು**